ಈ) ಆಸರೆ ಯೋಜನೆಯಲ್ಲಿ ಆಯ್ಕೆಯಾದ ಗ್ರಾಮಗಳಿಗೆ ಮೂಲಭೂತ ಸೌಕರ್ಯ ಒದಗಿಸಿದ ಗುತ್ತಿಗೆದಾರರಿಗೆ ಹಣ ಸಂದಾಯವಾಗಿದೆಯೇ ಈ ಸಂಬಂಧ ಇನ್ನೂ ಬಾಕಿ ಉಳಿದ ಬಿಲ್ಲುಗಳ ಮೊತ್ತವೆಷ್ಟು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಮಂತ್ರಿಗಳು)

ಅ) ಆಸರೆ ಯೋಜನೆಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಸಿಂಧಗಿ ಕ್ಷೇತ್ರದ ರಾಮನಹಳ್ಳಿ, ವಿಭೂತಿಹಳ್ಳಿ, ಗುಡ್ಡಹಳ್ಳಿ ಶಂಭೇವಾಡ, ಬೂದಿಹಾಳ ಡೋಣ, ದೇವಣಗಾಂವ. ನಂದಗೇರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಆ) ಕಲ್ಪಿಸಲಾಗಿದೆ.

ಇ) ರಾಮನಹಳ್ಳಿ ಮತ್ತು ಗುಡ್ಡಹಳ್ಳಿ ಗ್ರಾಮಗಳನ್ನು ಹೊರತುಪಡಿಸಿ ಉಳಿದ ಗ್ರಾಮಗಳ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. ಪಟ್ಟಿಯು 65 ಪುಟಗಳನ್ನು ಒಳಗೊಂಡಿರುವುದರಿಂದ, ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಸಲ್ಲಿಸಲಾಗುವುದು.

ಈ) ಪಾವತಿಯಾಗದೇ ಬಾಕಿ ಉಳಿದಿರುವ ಬಿಲ್ಲುಗಳ ಮೊತ್ತ

1. ರಾಮನಹಳ್ಳಿ – ₹ 25,00ಲಕ್ಷ
2. ನಂದಗೇರಿ – ₹ 05.00 ಲಕ್ಷ

ಕನ್ನಡ ಸಾಹಿತ್ಯ ಪರಿಷತ್ತಿ ಶತಮಾನೋತ್ಸವ ಭವನ ನಿರ್ಮಾಣ

278(327); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಭವನ ನಿರ್ಮಾಣ ಮಾಡಲು ಅನುದಾನ ಕೋರಿ ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ;

ಆ) ಹಾಗಿದ್ದಲ್ಲಿ, ಇದರ ಅಂದಾಜು ವೆಚ್ಚವೆಷ್ಟು;

ಇ) ಈ ಭವನ ನಿರ್ಮಾಣಕ್ಕೆ ಹಿಂದಿನ ಸರ್ಕಾರ ಮಂಜೂರು ಮಾಡಿದ ಅನುದಾನವೆಷ್ಟು,

ಈ) ಈ ಹಣ ಬಿಡುಗಡೆಯಾಗಿದೆಯೇ;

ಉ) 2013–14ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಸರ್ಕಾರ ಬಿಡುಗಡೆ ಮಾಡಲಿರುವ ಅನುದಾನವೆಷ್ಟು;

ಊ) ಈ ನಿರ್ಮಾಣ ಕಾರ್ಯ ಯಾವಾಗ ಪೂರ್ಣಗೊಳ್ಳುವುದು?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನದ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ₹ 5.00 ಕೋಟಿ

ಇ) ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಈ) ಇಲ್ಲ

ಉ) ಸರ್ಕಾರದ ಪರಿಶೀಲನೆಯಲ್ಲಿದೆ

ಊ) ಉದ್ಭವಿಸುವುದಿಲ್ಲ

"ನಿರ್ಮಲ್ ಭಾರತ್" ಯೋಜನೆ

(504)407; ಶ್ರೀ ಶಿವಾನಂದ ಎಸ್ ಪಾಟೀಲ (ಬಸವನಬಾಗೇವಾಡಿ)

ಅ) "ನಿರ್ಮಲ್ ಭಾರತ್" ಯೋಜನೆ ಯಾವಾಗ ಜಾರಿಗೆ ಬಂದಿದೆ; ಇದರ ಮುಖ್ಯೋದ್ದೇಯಗಳೇನು,

ಆ) ಗ್ರಾಮಗಳನ್ನು ತ್ಯಾಜ್ಯ ಮುಕ್ತ ಮಾಡುವಲ್ಲಿ "ನಿರ್ಮಲ್ ಭಾರತ್" ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಬಿಡುಗಡೆಯಾಗಿರುವ ಅನುದಾನದ